

# ಕೀಟಲೋಕದ ಛಾಯಾಗ್ರಾಹಕ



ಏಪ್ರಿಲ್ 13ರಿಂದ ಐದು ದಿನಗಳ ಕಾಲ ಬೆಂಗಳೂರಿನ ಆಲಯನ್ಸ್ ಫ್ರಾಂಚೈಸ್‌ನಲ್ಲಿ ಕೀಟ–ಫೋಟೊ ಪ್ರಿಯರಿಗೆ ಒಂದು ಪ್ರದರ್ಶನವಿದೆ.

■ ಪ್ರಸಾದ್ ಮೈರ್ಕಳ

ಈತ 'ಕೀಟಲೋಕದ ಛಾಯಾಗ್ರಾಹಕ'! ಕೀಟಗಳ ಜಗತ್ತನ್ನು ತನ್ನ ಪುಟ್ಟ ಸಾಮಾನ್ಯ ಕ್ಯಾಮರಾದಲ್ಲಿ ಅದ್ಭುತವಾಗಿ ಸೆರೆ ಹಿಡಿಯಲು ಸಾಧ್ಯ ಎಂಬುದನ್ನು ಈ ಸಚಿನ್ ತೋರಿಸಿಕೊಟ್ಟಿದ್ದಾರೆ. ಸಾಮಾನ್ಯವಾಗಿ ಮಿಡತೆ, ಪತಂಗ, ಜೇಡ, ಇರುವೆಗಳೇ ಇವರ ಛಾಯಾಗ್ರಹಣಕ್ಕೆ ರೂಪದರ್ಶಿಗಳು.

ಸಚಿನ್ ಕರಾವಳಿಯ ಬದಿಯಡ್ಕದ ನಿವಾಸಿ. ತಂದೆ ಸದಾನಂದ ಶೆಟ್ಟಿ. ತಾಯಿ ಸುಜಾತಾ. ತಮ್ಮ ಸುಶಾಂತ್. ಇನ್ನೂ 24ರ ಹರೆಯ. ಬದಿಯಡ್ಕದ ನವಜೀವನ ಶಾಲೆಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ. ಮಂಗಳೂರಿನ ರಾಮಕೃಷ್ಣ ವಿದ್ಯಾಲಯದಲ್ಲಿ ಬಿಬಿಎಂ ಪದವಿ. ಕೆನಾನ್ ಡಿಜಿಟಲ್ ಕ್ಯಾಮರಾದಿಂದಲೇ ಅದ್ಭುತ ಹಾಗೂ ಅಪರೂಪದ ಕೀಟಗಳ ಚಿತ್ರ ಸೆರೆ ಹಿಡಿಯುವ ಚಾಣಾಕ್ಷತೆ ಇವರದ್ದು. ಮನೆಯ ಸುತ್ತಲೂ ಇರುವ ಇರುವೆ, ಬರುವ ಮಿಡತೆ, ಪತಂಗ ಹಾಗೂ ಜೇಡಗಳ ವಿಭಿನ್ನ ವಿನ್ಯಾಸದ ಅನೇಕ ಛಾಯಾಚಿತ್ರಗಳನ್ನು ಸಂಗ್ರಹಿಸಿದ್ದಾರೆ.

(8ನೇ ಪುಟ ನೋಡಿ)

